
ಟು ಯು ಆಂಡ್ ಯುವರ್ ಎಂಟೈರ್ ಟೀಮ್' ಎನ್ನುತ್ತ ಕೈಕುಲುಕಿದರು. ಮುಗುಳುನಗೆಯ ತಮ್ಮ ಸಹಜ ಪ್ರವೃತ್ತಿಯಲ್ಲಿಯೇ ಡಾ. ಚಟರ್ಜಿ ಅವರು ರಿಪೋರ್ಟನ್ನು ಕೈಗೆ ತೆಗೆದುಕೊಂಡು, ಆಡಿಟ್ ಟೀಮಿನ ಎಲ್ಲ ಸದಸ್ಯರಿಗೂ ನಮಸ್ಕರಿಸಿದರು. ಅನಂತರ, ಕೊನೆಯ ದಿನ ಆ ಟೀಮಿನವರಿಗೆ ಪ್ರೀತಿಯಿಂದ ಕೊಡಬೇಕೆಂದು ತಮ್ಮ ಮನೆಯಿಂದಲೇ ಮಾಡಿಸಿ ತರಿಸಿದ್ದ ಉಪ್ಪಿಟ್ಟು, ಶಿರಾ ಹಾಗೂ ಚಹಾ ಕೊಟ್ಟು ಎಲ್ಲರಿಗೂ ಧನ್ಯವಾದ ಹೇಳಿ, ಬೀಳ್ಕೊಟ್ಟಿದ್ದರು.

ಬೇರೆ ಕಚೇರಿಗಳಲ್ಲಿ ಆಡಿಟಿಂಗ್‌ನ ಕೊನೆಯ ದಿನ ಮಾಮೂಲಾಗಿ ಸಿಗುತ್ತಿದ್ದ ಕವ್ವರ್ ಮತ್ತು ಗಿಫ್ಟ್‌ಪ್ಯಾಕ್‌ನ್ನು ನೆನೆಸಿಕೊಂಡ ಆ ಟೀಮಿನ ಬಹುತೇಕ ಸದಸ್ಯರಿಗೆ ಡಾ. ಸತ್ಯಾರ್ಥಿ ಚಟರ್ಜಿ ಅವರ ಉಪ್ಪಿಟ್ಟು–ಶಿರಾ–ಚಹಾಗಳೇ ಅಲ್ಪ ತೃಪ್ತಿ ನೀಡಿದ್ದವು. ಕಚೇರಿಗಳಲ್ಲಿ ನಡೆಯುತ್ತಿದ್ದ 'ಗೋಲ್‌ಮಾಲ್' ಮುಚ್ಚಿಹಾಕಲೆಂದೇ ಅವರಿಗೆ ಗಿಫ್ಟ್‌ಪ್ಯಾಕ್ ಅಥವಾ ಕವ್ವರ್‌ಗಳ ಕಾಣಿಕೆ ಸಿಗುತ್ತಿದ್ದುದು ಗುಟ್ಟಾದ ವಿಷಯವೇನೂ ಆಗಿರಲಿಲ್ಲ. ಆದರೆ, ಈ ಕಚೇರಿಯಲ್ಲಿ ಅಂಥದ್ದಕ್ಕೆ ಅವಕಾಶವೇ ಇರಲಿಲ್ಲವೆಂದ ಮೇಲೆ ಅದೆಲ್ಲಿಯ ಗಿಫ್ಟ್‌ಪ್ಯಾಕ್? ಎಲ್ಲಿಯ ಕವ್ವರ್? ಶಿರಾ–ಉಪ್ಪಿಟ್ಟಿನ ಡರಿಕೆ ಹೊಡೆಯುತ್ತ, ಡಾ. ಸತ್ಯಾರ್ಥಿ ಅವರಿಗೆ ನಮಸ್ಕಾರ ಹೇಳಿ ಅವರೆಲ್ಲ ನಿರ್ಗಮಿಸಿದ್ದರು ಅಲ್ಲಿಂದ.

ಕಾರ್ಯಕ್ರಮಗಳ ನಿರ್ಮಾಣ, ಪ್ರಸಾರ ಮತ್ತು ಅದಕ್ಕೆ ಸಂಬಂಧಿಸಿದ ಆಡಳಿತ ಕಾರ್ಯವನ್ನು ನಿರ್ವಹಿಸುತ್ತಿದ್ದ ಆ ಕಚೇರಿಯ ಕೆಲಸಗಾರರೆಲ್ಲ ತಮ್ಮ ಪ್ರಾಮಾಣಿಕ ಕೆಲಸಕ್ಕಿಂತ ಹೆಚ್ಚಾಗಿ ಡಾ. ಚಟರ್ಜಿ ಅವರ ಮಾರ್ಗದರ್ಶನ ಮತ್ತು ಕಾರ್ಯವೈಖರಿಯ ಬಗ್ಗೆ ಹೆಮ್ಮೆ ಪಡುತ್ತಿದ್ದರು. ಡಾ. ಸತ್ಯಾರ್ಥಿ ಚಟರ್ಜಿ ಅವರ ಕೈ, ಬಾಯಿ, ವರ್ತನೆ ಎಲ್ಲ ಶುದ್ಧವಾಗಿದ್ದಷ್ಟೇ ಅಲ್ಲ, ಮುಖಸ್ತುತಿ ಮತ್ತು ಹೊಗಳಿಕೆಯ ಮಾತುಗಳಿಗೆ ಅವರು ಎಂದೂ ಮನಸೋಲುವವರಾಗಿರಲಿಲ್ಲ. ಅವರ ಅಂಥ ವ್ಯಕ್ತಿತ್ವವನ್ನು ಅರಿತಿದ್ದ ಸಹೋದ್ಯೋಗಿಗಳು ಹೆಚ್ಚು ಮಾತಾಡದೆ, 'ಕಾಂಗ್ರ್ಯಾಚುಲೇಶನ್ಸ್ ಸರ್' ಎಂದು ಮಾತ್ರ ಹೇಳಿ, ತಮ್ಮ ತಮ್ಮ ಕೆಲಸದ ಸ್ಥಳಗಳಿಗೆ ಮರಳಿದ್ದರು. ಕಚೇರಿಯ ಸಮಯ ಮುಗಿಯುವ ಹೊತ್ತಾಗಿದ್ದರಿಂದ ಆಡಿಟ್ ರಿಪೋರ್ಟನ್ನು ನೋಡಲು ಈಗ ಸಮಯವಲ್ಲವೆಂದರಿತು, ಅದನ್ನು ತಮ್ಮ ಟೇಬಲ್ ಕೆಳಗಿನ ಡ್ರಾಯರ್‌ನಲ್ಲಿಟ್ಟು, ಉಳಿದ ಕೆಲಸ ಮುಗಿಸಿ ಮನೆಗೆ ನಡೆದಿದ್ದರು ನಿರ್ದೇಶಕ ಡಾ. ಚಟರ್ಜಿ.



★★★

ಡೈರೇಜ್‌ಗೆಂದು ತಮ್ಮ ಸ್ಟೆನೋಗ್ರಾಫರ್‌ಗೆ ಪತ್ರಗಳನ್ನು ಕೊಡುವ ಮೊದಲು ಅವುಗಳ ಮೇಲೆ ಒಮ್ಮೆ ಕಣ್ಣಾಡಿಸುವುದು ಡಾ. ಚಟರ್ಜಿ ಅವರಿಗೆ ನಿತ್ಯದ ರೂಢಿ. ಎಂದಿನಂತೆ ಅಂದೂ ಅರ್ಧ ತಾಸು ಮೊದಲೇ ಕಚೇರಿಗೆ ಬಂದಿದ್ದ ಅವರು, ಸಹಜ ಕುತೂಹಲದಿಂದ ನಿನ್ನೆ ಆಡಿಟ್ ಟೀಮಿನವರು ಕೊಟ್ಟಿದ್ದ ರಿಪೋರ್ಟನ್ನು ಡ್ರಾಯರನಿಂದ ಹೊರತೆಗೆದು ಅದರ ಮೇಲೆ ಕಣ್ಣಾಡಿಸತೊಡಗಿದ್ದರು. ಅಷ್ಟರಲ್ಲೇ 'ಮೇ ಆಯ್ ಕಮಿನ್ ಸರ್' ಎಂದು ಸ್ಟೆನೋ ಪಪಿಹಾ, ತನ್ನ ಮೃದುದನಿಯಲ್ಲಿ ಕೇಳುತ್ತ ಬಾಗಿಲನ್ನು ಅರ್ಧ ತೆರೆದು ನಿಂತಿದ್ದಳು. 'ಯಸ್ ಪ್ಲೀಜ್, ಕಮಿನ್ ಪಪಿಹಾ...' ಎಂದು ಬಾಯಿ ಅನ್ನುತ್ತಿದ್ದರೂ ಅವರ ಕಣ್ಣುಗಳು ಆಡಿಟ್ ರಿಪೋರ್ಟ್ ಮೇಲೆಯೇ ನೆಟ್ಟಿದ್ದವು. ಅದರ ಬಗ್ಗೆ ಅವರಿಗೆ ಯಾವುದೇ ಭಯವಾಗಲಿ, ಅಥವಾ ಅದರಲ್ಲಿ ಏನಿರುತ್ತದೆಯೋ ಎಂಬ ದುಗುಡವಾಗಲಿ ಖಂಡಿತ ಇರಲಿಲ್ಲ. ಸಹಜ ಕುತೂಹಲದಿಂದ ಮಾತ್ರ ಅದರ ಮೇಲೆ ಕಣ್ಣಾಡಿಸುತ್ತಿದ್ದರು. ಹಾಗೆ ನೋಡುತ್ತ ಕೊನೆಯ ಪ್ಯಾರಾದತ್ತ ಬಂದಾಗ ಅದೇಕೋ ಅವರ ತುಟಿಗಳ ಮೇಲೆ ಮುಗುಳು ನಗೆಯೊಂದು ತಂತಾನೆ ಅರಳಿತು!